## ಪ್ರೇಮದ ಮಾರ್ಗ

ಮಧುರ ಭಕ್ತಿಯ ಶ್ರೇಷ್ಠ ನಿದರ್ಶನವೆಂದರೆ 8-9ನೆಯ ಶತಮಾನಗಳಲ್ಲಿ ತಮಿಳುನಾಡಿನಲ್ಲಿ ಮೂಡಿ ಬಂದ 12 ಆಳ್ವಾರ್‌ಗಳಲ್ಲಿ ಅತ್ಯಂತ ಪ್ರಸಿದ್ಧನಾದ ನಮ್ಮಾಳ್ವಾರ್. ಆಳ್ವಾರ್ ಎಂದರೆ ತಮಿಳಿನಲ್ಲಿ 'ಮುಳುಗಿದವನು' ಎಂದು ಅರ್ಥ; ಆಳ್ವಾರ್‌ಗಳು ವಿಷ್ಣುಭಕ್ತಿಯೆಂಬ ಕಡಲಲ್ಲಿ ಮುಳುಗಿದವರು. ಇವರೆಲ್ಲರೂ ವೇದೋಪನಿಷತ್ತುಗಳ ಮುಖ್ಯಾಂಶಗಳನ್ನು, ಸರಳ ತಮಿಳಿನ ಮೂಲಕ ಜನಸಾಮಾನ್ಯರಿಗೆ ತಿಳಿಸಲು ಪ್ರಯತ್ನಿಸಿದರು; ಆ ಬಗೆಯ ಪ್ರಯತ್ನದ ಮೂಲಕ ವೈದಿಕ-ಬ್ರಾಹ್ಮಣ ಪರಂಪರೆ ಮತ್ತು ತಮಿಳುನಾಡಿನ ಭಕ್ತಿಪಂಥ ಇವೆರಡರ ನಡುವಿನ ಸೇತುವೆಯಂತೆ ಕಾರ್ಯವನ್ನು ನಿರ್ವಹಿಸಿದರು. ಹನ್ನೆರಡು ಆಳ್ವಾರ್ ಸಂತ-ಕವಿಗಳಲ್ಲಿ ಅತಿ ಮುಖ್ಯರಾದವರು ಹಾಗೂ ತಮಿಳುನಾಡಿನ ಹೊರಗೂ ಪ್ರಸಿದ್ಧನಾದವರು ನಮ್ಮಾಳ್ವಾರ್. (ನಮ್ಮಾಳ್ವಾರ್ ಹುಟ್ಟಿನಿಂದ ಶೂದ್ರನಾದುದರಿಂದ, ಈ ಭಕ್ತಿಪಂಥವನ್ನು 'ಜಾತಿ ಕಟ್ಟುಪಾಡುಗಳನ್ನು ದಾಟುವಿಕೆ' ಎಂದೂ ಗುರುತಿಸಬಹುದು.)

ನಮ್ಮಾಳ್ವಾರ್ ರಚಿಸಿದ 1102 ಕವನಗಳ ಸಂಕಲನವನ್ನು 'ತಿರುವಾಯ್‌ಮೊಳಿ' ಎಂದು ಕರೆಯುತ್ತಾರೆ; ಈ ಸಂಕಲನವು ತಮಿಳುನಾಡಿನ ವೈಷ್ಣವ ಪಂಥಕ್ಕೆ ಸಂಬಂಧಿಸಿದಂತೆ 'ಆಧಾರಕೃತಿ'ಯೆಂದು ಪರಿಗಣನೆಗೊಂಡಿದೆ.

ನಮ್ಮಾಳ್ವಾರ್ ಅವರ ಮಧುರಭಕ್ತಿಯ ಸ್ವರೂಪವನ್ನು ಹೀಗೆ ವಿವರಿಸಬಹುದು. ಅವರು ತಮ್ಮ ಇಷ್ಟದೈವವು (ವಿಷ್ಣು) ಸುಂದರ ಆಕಾರವನ್ನು ('ದಿವ್ಯ ಮಂಗಳ ವಿಗ್ರಹ') ಹೊಂದಿರುವಂತೆ ಕಲ್ಪಿಸಿಕೊಳ್ಳುತ್ತಾರೆ. ಮಾನವನ ಆತ್ಮದ ಸ್ವರೂಪ ಹಾಗೂ ಉದ್ದೇಶವಿರುವುದು ಆ ಇಷ್ಟದೈವದೊಡನೆ ಮತ್ತೆ ಒಂದಾಗುವ ಮಾರ್ಗವನ್ನು ಹುಡುಕುವುದು - ವಧು ಒಬ್ಬಳು ತನ್ನ ವರನನ್ನು ಅರಸುವಂತೆ. (ಅಲ್ಲಿದೆ ನಮ್ಮ ಮನೆ) ಆದುದರಿಂದ, ಇವರು ತನ್ನ ಇಷ್ಟದೈವ ವಿಷ್ಣುವಿನ ಸಾನ್ನಿಧ್ಯವು ದೊರಕುವ ತನಕ ಅದಕ್ಕಾಗಿ ಹಂಬಲಿಸುತ್ತಾರೆ - ಪ್ರೇಮಿಯೊಬ್ಬಳು ತನ್ನ ಪ್ರಿಯಕರನಿಗಾಗಿ ಹಂಬಲಿಸುವಂತೆ. ಒಂದು ಕವನದಲ್ಲಿ ನಮ್ಮಾಳ್ವಾರ್ ಪ್ರಿಯಕರನಿಂದ ದೂರವಿರುವ ಪ್ರೇಯಸಿಯಂತೆ, ವಿರಹದಿಂದ ದುಃಖಿಸುತ್ತಾ, ಆಕಾಶದಲ್ಲಿ ಅಲೆದಾಡುವ ಪಕ್ಷಿಗಳನ್ನು ಹೀಗೆ ಪ್ರಾರ್ಥಿಸುತ್ತಾರೆ: 'ನೀವೆಲ್ಲಾ ನನ್ನ ಸ್ವಾಮಿಯ ಬಳಿ ಹೋಗಿ, ಅವನ ಸಾನ್ನಿಧ್ಯದಿಂದ ದೂರವಿರುವ ನಾನು ಅನುಭವಿಸುತ್ತಿರುವ ವೇದನೆ-ಕಷ್ಟಗಳನ್ನು ನನ್ನ ಸ್ವಾಮಿಗೆ ತಿಳಿಸಿ; ಮತ್ತು ನನ್ನ ಬಗ್ಗೆ ದಯೆ ತೋರಲು ಪ್ರಾರ್ಥಿಸಿ. ನೀರು ಹಕ್ಕಿಗಳೇ, ನೀವು ಈಗಲೇ ಸ್ವರ್ಗಕ್ಕೆ ಹೋಗಿ, ನನ್ನ ಸ್ವಾಮಿಯ ಸಾನ್ನಿಧ್ಯಕ್ಕಾಗಿ ನಾನೆಷ್ಟು ಹಾತೊರೆಯುತ್ತಿದ್ದೇನೆ ಎಂಬುದನ್ನು ಮನವರಿಕೆ ಮಾಡಿಕೊಡಿ. ಈ ಕಾರ್ಯವನ್ನು ನೀವು ಮಾಡಿದ್ದಾದರೆ ನಿಮಗೆ ಸ್ವರ್ಗಪ್ರಾಪ್ತಿಯಾಗುತ್ತದೆ.'

ಮತ್ತೊಂದು ಕವನದಲ್ಲಿ ತನ್ನ ಪ್ರಾರ್ಥನೆಯನ್ನು ಲೆಕ್ಕಿಸದ ಸ್ವಾಮಿಯ ಬಗ್ಗೆ ಕನಲಿ, ಹೀಗೆ ತನ್ನ ಸಖಿಗೆ ಹೇಳುತ್ತಾರೆ:

'ಪ್ರಿಯ ಸಖಿ, ನೋಡುತ್ತಿರು. ಹುಚ್ಚಿಯಂತೆ ನಾನು ಬೀದಿಬೀದಿಗಳಲ್ಲಿ ಅಲೆಯುತ್ತಾ ಕೂಗಿ ಹೇಳುತ್ತೇನೆ:
ನನ್ನ ಸ್ವಾಮಿಯ ಒಳ್ಳೆಯ ಹೆಸರನ್ನು ಕೆಡಿಸಲು ನಾನು ಏನು ಮಾಡಲೂ ಹೇಸುವುದಿಲ್ಲ–
ಒಳ್ಳೆಯ–ಕೆಟ್ಟ ಯಾವ ಮಾರ್ಗವನ್ನು ಬೇಕಾದರೂ ಹಿಡಿಯುತ್ತೇನೆ.
ಕಾರಣ, ಅವನು ನನ್ನ ಹೃದಯವನ್ನು ಕದ್ದು, ನನ್ನ ಮಾನವನ್ನು ಮಣ್ಣುಗೂಡಿಸಿ,
ತಾನು ಮಾತ್ರ ನಿರಮ್ಮಳವಾಗಿ ತನ್ನ ದೇವತೆಗಳೊಡನೆ ಸ್ವರ್ಗದಲ್ಲಿ ಅಡಗಿಕೊಂಡಿದ್ದಾನೆ.'

ತನ್ನ ಸ್ವಾಮಿಗಾಗಿ ಕಾದು ಕಾದು, ಬೇಸತ್ತಿರುವ ಪ್ರೇಯಸಿಗೆ ಇಡೀ ನಿಸರ್ಗವು ತನ್ನಂತೆಯೇ ಏಕತಾನತೆಯಿಂದ ಖಿನ್ನವಾಗಿರುವಂತೆ ಕಾಣುತ್ತದೆ:

'ಒಂದರ ಮೇಲೊಂದೆದ್ದು ಅಲೆಗಳು ದಂಡೆಗಪ್ಪಳಿಸಿ,
ಸಾಗರವ ಸುತ್ತಿರುವ ತೋಪುಗಳನ್ನು ತೋಯಿಸುತ್ತಿವೆ –ನಿರಂತರ.
ಓ ಕ್ರೌಂಚವೆ! ಜಗವೆಲ್ಲವೂ ಮಲಗಿ ನಿದ್ರಿಸುತ್ತಿರುವಾಗ, ನೀನಲೆಯುತ್ತಿರುವೆ
ನಿದ್ರಾಹೀನಳಾಗಿ, ಈ ತೋಪಿನಲಿ– ನನ್ನಂತೆ. ಇದಕ್ಕೆ ಕಾರಣ?
ಪ್ರಾಯಃ, ನನ್ನ ಹೃದಯವನ್ನು ಕದ್ದ ಸ್ವಾಮಿಯೇ ನಿನ್ನದನ್ನೂ ಕದ್ದಿರಬಹುದು.